ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ
ಸಿಸಿ.ನಂ. 731/2021

ಸಾಕ್ಷಿಯ ಹೆಸರುಃ ತಾಜಿಲ್ ಮುಬೀನ್ ಡಿಡಬ್ಲ್ಯೂ. 2

ತಂದೆಯ ಹೆಸರುಃ ಎಂ ಹೆಚ್ ಉಮರಬ್ಬ

ವಯಸ್ಸುಃ 42 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಕೊಪ್ಪ

ದಿನಾಂಕಃ20/01/2025 ರಂದು ಪ್ರಮಾಣವಚನ ಬೋಧಿಸಲಾಯಿತು.

**ಃಃ ಮುಖ್ಯ ವಿಚಾರಣೆಃಃ ಆರೋಪಿ ಪರಃ ಶ್ರೀ ಕೆ ಆರ್ ಕೆ., ವಕೀಲರಿಂದಃ**

ನನಗೆ ಈ ಕೇಸಿನ ಪಿರ್ಯಾದುದಾರರ ಪರಿಚಯ ಇರುತ್ತದೆ. ಅದೇ ರೀತಿ ಸದರಿ ಪ್ರಕರಣದ ಆರೋಪಿಯಾದ ನಾಗರಾಜ್ ಅವರೂ ಸಹಾ ನನಗೆ ಪರಿಚಯ ಇರುತ್ತಾರೆ. ನಾಗರಾಜ್ ಅವರು ನನಗೆ ಸುಮಾರು 15 ವರ್ಷಗಳಿಂದ ಪರಿಚಯ ಇರುತ್ತಾರೆ. ಅದೇ ರೀತಿ ಸದರಿ ಪ್ರಕರಣದ ಫಿರ್ಯಾದುದಾರರಾದ ರಾಜೇಶ್ ಅವರೂ ಸಹಾ ನನಗೆ 15 ವರ್ಷಗಳಿಂದ ಪರಿಚಯ ಇರುತ್ತಾರೆ.

ಈ ಪ್ರಕರಣದ ಮಾಹಿತಿ ನನಗೆ ಇದೆ. 2018 ರಲ್ಲಿ ಈ ಪ್ರಕರಣದ ಆರೋಪಿಯವರು ನನಗೆ ಚೆಕ್ಕನ್ನು ನೀಡಿರುತ್ತಾರೆ. ನನ್ನ ಹಾಗೂ ಆರೋಪಿಯ ನಡುವೆ ವ್ಯವಹಾರಗಳು ಇರುವುದರಿಂದ ಅವರು ನನಗೆ ಚೆಕ್ಕನ್ನು ನೀಡಿರುತ್ತಾರೆ. ರಾಜೇಶ್ ಅವರು ನಮ್ಮ ಮನೆಯ ಹಿಂದುಗಡೆ ವಾಸವಿದ್ದಾರೆ. ಅವರು ನಮ್ಮ ಮನೆಗೆ ಬರುವುದು ಹೋಗುವುದು ಮಾಡುತ್ತಿದ್ದರು. ನನ್ನ ತಂದೆ ಹಾಗೂ ರಾಜೇಶ್ ಅವರ ನಡುವೆ ಅಡಿಕೆ ವ್ಯಾಪಾರದ ವ್ಯವಹಾರಗಳು ಇದ್ದವು. 2014 ರಲ್ಲಿ ರಾಜೇಶ್ ಅವರ ಮೇಲೆ ಒಂದು ಕ್ರಿಮಿನಲ್ ಪ್ರಕರಣ ದಾಖಲಾದಾಗ ನಾನು ಅವರಿಗೆ ಜಾಮೀನುದಾರನಾಗಿರುತ್ತೇನೆ. ಆಗಿನಿಂದ ನನಗೆ ಅವರು ಪರಿಚಯವಾಗಿರುತ್ತಾರೆ. ರಾಜೇಶ್ ಅವರು ನನಗೆ ಫೋನ್ ಮಾಡಿ ನಾಗರಾಜ್ ಅವರಿಗೆ

ತಾನು ನೋಟಿಸನ್ನು ನೀಡಿರುವ ಬಗ್ಗೆ ತಿಳಿಸಿರುತ್ತಾರೆ. ನಾನು ನೋಡಬೇಕಾದರೆ ನಾಲ್ಕು ಚೆಕ್ ಕಾಣೆಯಾಗಿರುತ್ತದೆ. ನನ್ನ ಮನೆಯಲ್ಲಿದ್ದ ನಾಗರಾಜ್ ಅವರು ಕೊಟ್ಟಿದ್ದ ನಾಲ್ಕು ಚೆಕ್ ಕಾಣೆಯಾಗಿರುತ್ತದೆ. ನಾಗರಾಜ್ ಅವರು ಸಹಿ ಹಾಕಿದ್ದ 4 ಖಾಲಿ ಚೆಕ್ಕುಗಳು ಆಗಿರುತ್ತವೆ. ರಾಜೇಶ್ ಅವರು ನನಗೆ ಫೋನ್ ಮಾಡಿದಾಗ ಈ ರೀತಿ ಮಾಡಬೇಡಿ ಎಂದು ನಾನು ಅವರಿಗೆ ತಿಳಿಸಿದಾಗ, ಸದರಿ ಪ್ರಕರಣವನ್ನು ಅವರು ವಾಪಾಸು ತೆಗೆದುಕೊಳ್ಳುತ್ತಾರೆ ಎಂದು ತಿಳಿಸಿರುತ್ತಾರೆ.

ನಂತರ 2021 ರಲ್ಲಿ ನಾಗರಾಜ್ ಅವರು ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ ವಕಾಲತ್ತನ್ನು ಸಲ್ಲಿಸಿರುತ್ತಾರೆ. ಜನವರಿ, 2022 ರಲ್ಲಿ ಅವರಿಗೆ ವಾರಂಟ್ ಆಗಿರುತ್ತದೆ. ನಂತರ ಆರೋಪಿಯವರು ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿದ್ದು ಹಾಗೂ ನಾನು ಅವರಿಗೆ ಜಾಮೀನನ್ನು ನೀಡಿರುತ್ತೇನೆ. ಸದರಿ 4 ಚೆಕ್ಕುಗಳನ್ನು ನಾಗರಾಜ್ ಅವರು ನನಗೆ ನೀಡಿರುತ್ತಾರೆ. ಸದರಿ ಚೆಕ್ಕುಗಳನ್ನು ನಾಗರಾಜ್ ಅವರು ನನಗೆ ವಾಪಾಸು ಕೇಳಿದಾಗ ಅವುಗಳು ಕಾಣೆಯಾಗಿರುತ್ತವೆ. ರಾಜೇಶ್ ಅವರು ಫೋನ್ ಮೂಲಕ ನನಗೆ ಈ ವಿಚಾರವನ್ನು ತಿಳಿಸಿದಾಗ ಸದರಿ ಪ್ರಕರಣವನ್ನು ವಾಪಾಸು ತೆಗೆದುಕೊಳ್ಳುತ್ತಾರೆ ಎಂದು ತಿಳಿಸಿದ್ದು ಆದರೆ ಸದರಿ ಪ್ರಕರಣವನ್ನು ಅವರು ವಾಪಾಸು ತೆಗೆದುಕೊಂಡಿರುವುದಿಲ್ಲ. ನಾಗರಾಜ್ ಹಾಗೂ ರಾಜೇಶ್ ಅವರ ನಡುವೆ ಯಾವುದೇ ವ್ಯವಹಾರಗಳೂ ಇರಲಿಲ್ಲ.

**<u>ಪಾಟೀ ಸವಾಲುಃಃ ಫಿರ್ಯಾದುದಾರರ ಪರಃ ಶ್ರೀ ಬಿಕೆವಿ., ವಕೀಲರಿಂದಃ</u>**

ಇದೇ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಇದ್ದಂತಹ ಎರಡು ಚೆಕ್ ಪ್ರಕರಣಗಳು ರಾಜಿಯಾಗಿರುತ್ತವೆ ಹಾಗೂ ಈಗ ಪ್ರಸ್ತುತ ಒಂದು ಚೆಕ್ ಪ್ರಕರಣ ಜೇಸುದಾಸ್ ಅವರು ಎರಡು ಲಕ್ಷ ರೂಪಾಯಿಗಳಿಗೆ ಇದೇ ನ್ಯಾಯಾಲಯದಲ್ಲಿ ನನ್ನ ವಿರುದ್ಧ ದಾಖಲಿಸಿರುತ್ತಾರೆ. ಈ ಹಿಂದೆ ರಾಜಿಯಾಗಿರುವ ಎರಡೂ ಕೇಸುಗಳಲ್ಲಿ ಒಂದು ಕೇಸು ರಾಜೇಶ್ ಅವರು ಒಂದು ಲಕ್ಷಕ್ಕೆ ದಾಖಲು ಮಾಡಿರುತ್ತಾರೆ ಹಾಗೂ ಇನ್ನೊಬ್ಬರು ಒಂದು ಲಕ್ಷ ರೂಪಾಯಿಗಳಿಗೆ ದಾಖಲು ಮಾಡಿದ್ದರು, ಅವರ ಹೆಸರು ನನಗೆ ಈಗ ನೆನಪಿಲ್ಲ. ರಾಜಿಯಾಗಿರುವ ಪ್ರಕರಣದಲ್ಲಿ

ನಾನು ಹಣವನ್ನು ಪಾವತಿ ಮಾಡಿ ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಎರಡೂ ಪ್ರಕರಣಗಳಲ್ಲಿ ನಾನು ಹಣವನ್ನು ಕೊಟ್ಟು ರಾಜಿ ಮಾಡಿಕೊಂಡಿರುವುದಿಲ್ಲ, ಒಂದೇ ಪ್ರಕರಣದಲ್ಲಿ ಹಣವನ್ನು ಕೊಟ್ಟು ರಾಜಿ ಮಾಡಿಕೊಂಡಿರುತ್ತೇನೆ. ರಾಜೇಶ್ ಅವರು ದಾಖಲಿಸಿರುವ ಪ್ರಕರಣದಲ್ಲಿ ನಾನು ಎಷ್ಟು ಹಣವನ್ನು ಕೊಟ್ಟು ರಾಜಿ ಮಾಡಿಕೊಂಡಿರುತ್ತೇನೆ ಎಂದರೆ ಆ ಪ್ರಕರಣದಲ್ಲಿ ನಾನು ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ. ಸದರಿ ಪ್ರಕರಣ ಸುಮಾರು ಎರಡು ವರ್ಷಗಳವರೆಗೂ ನಡೆದಿರುತ್ತದೆ. ರಾಜೇಶ್ ಅವರ ಪ್ರಕರಣ ಮುಕ್ತಾಯವಾಗಿ ಈಗಿನಿಂದ ಸುಮಾರು ಮೂರು ವರ್ಷಗಳಾಗಿರಬಹುದು. 2014 ನೇ ಇಸವಿಯಲ್ಲಿ ನಾನು ರಾಜೇಶ್ ಅವರಿಗೆ ಜಾಮೀನುದಾರನಾಗಿರುತ್ತೇನೆ. ಸದರಿ ಪ್ರಕರಣದಲ್ಲಿ ನಾನು ಜಾಮೀನುದಾರನಾಗಿದ್ದರಿಂದ ಚೆಕ್ ಪ್ರಕರಣವನ್ನು ನನ್ನ ವಿರುದ್ಧ ವಾಪಾಸು ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಮನವಿಯನ್ನು ಸಲ್ಲಿಸಿರುವುದಿಲ್ಲ ಆದರೆ ನಾನು ಹಣವನ್ನು ಕೊಟ್ಟಿದ್ದರಿಂದ ಸದರಿ ಪ್ರಕರಣವನ್ನು ವಾಪಾಸು ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಮನವಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ.

ನಾನು ಕೃಷಿಕನಾಗಿರುತ್ತೇನೆ. ನಾನು ಅಡಿಕೆ, ಕಾಳುಮೆಣಸು, ಕಾಫಿ ವ್ಯಾಪಾರಗಳನ್ನು ಮಾಡುತ್ತೇನೆ. ಫಿರ್ಯಾದುದಾರರಿಗೂ ಹಾಗೂ ನನಗೂ ಯಾವುದೇ ರೀತಿಯ ವ್ಯವಾಹಾರಿಕ ಸಂಬಂಧಗಳು ಇಲ್ಲ ಎಂದರೆ ಸರಿ. ನಾನು ಹೇಳಿದಂತೆ ಅಡಿಕೆ , ಕಾಳುಮೆಣಸು, ಕಾಫಿ , ಏಲಕ್ಕಿ ವ್ಯವಹಾರಗಳನ್ನು ಆರೋಪಿಯವರು ಏನಾದರೂ ಮಾಡುತ್ತಿದ್ದರೇ ಎಂದರೆ ಇಲ್ಲ.

ಆರೋಪಿಯ ತಂದೆಯ ಹೆಸರು ತಮ್ಮಯ್ಯ ನಾಯ್ಕ ಆಗಿರುತ್ತದೆ. ಈಗ ಆರೋಪಿಯವರು ಕೊಪ್ಪದಲ್ಲಿ ಗುಣವಂತೆ ಮೊದಲನೇ ಕ್ರಾಸ್ ಹತ್ತಿರ ವಾಸವಿದ್ದಾರೆ. ಗುಣವಂತೆ ಮೊದಲನೇ ಕ್ರಾಸ್ ಹತ್ತಿರ ಗಂಗನಸರಳು ಬರುತ್ತದೆ ಎಂದರೆ ಕುವೆಂಪು ನಗರ ಬರುತ್ತದೆ. ಆರೋಪಿಯವರು ಮೂಲತಃ ಕೊಪ್ಪದವರು, ಅವರು ಮೂಲತಃ ಎಲ್ಲಿಂದ ಬಂದಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಯವರು ಬಾವಿ ಹಾಗೂ ಬಿಲ್ಡಿಂಗ್ ಕಾಂಟ್ರಾಕ್ಟ್ ಕೆಲಸವನ್ನು ಮಾಡುತ್ತಿದ್ದಾರೆ, ಅವರು ಸದರಿ ಕೆಲಸವನ್ನು ಎಷ್ಟು ವರ್ಷಗಳಿಂದ

ಮಾಡುತ್ತಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

ನಾನು ವಾಸವಿರುವ ಏರಿಯಾಗೆ ವಿನೋಬಾ ನಗರ ಎಂದು ಕರೆಯುತ್ತಾರೆ. ಮದ್ರಾಸ್ ಹಾರ್ಡ್ ವೇರ್ ಇರುವುದು ವಿನೋಬಾ ನಗರದಲ್ಲಿ.

ಆರೋಪಿಯವರು ರಾಧಾಕೃಷ್ಣ ಎಂಬುವವರ ಬಾಡಿಗೆ ಮನೆಯಲ್ಲಿ ವಾಸವಿದ್ದಾರೆ, ಸಧ್ಯಕ್ಕೆ ಅವರು ಎಲ್ಲಿ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಹಾಗೂ ನನ್ನ ಹಣಕಾಸಿನ ವ್ಯವಹಾರಗಳು ಇದ್ದವು.

ನಾನು ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಲೇವಾದೇವಿಯನ್ನು ಮಾಡುವುದಿಲ್ಲ. ಆರೋಪಿಯವರಿಗೆ 2018 ರಲ್ಲಿ ನಾನು ಎರಡು ಲಕ್ಷ ರೂಪಾಯಿಗಳನ್ನು ಸಾಲವಾಗಿ ನೀಡಿರುತ್ತೇನೆ, ಯಾವ ತಿಂಗಳು, ದಿನಾಂಕ ನನಗೆ ಈಗ ನೆನಪಿಲ್ಲ.

ನಾನು ನನ್ನ ವ್ಯವಹಾರದಲ್ಲಿ ಸರ್ಕಾರಕ್ಕೆ ಯಾವುದೇ ಆದಾಯ ತೆರಿಗೆಯನ್ನು ಪಾವತಿ ಮಾಡಿರುವುದಿಲ್ಲ. ನಾನು ಆರೋಪಿಯವರಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟ ಸಮಯದಲ್ಲಿ ನನ್ನ ವಿರುದ್ಧ ಚೆಕ್ ಪ್ರಕರಣಗಳು ಇದೇ ನ್ಯಾಯಾಲಯದಲ್ಲಿ ಬಾಕಿ ಇದ್ದವು ಎಂದರೆ ನನಗೆ ಈಗ ನೆನಪಿಲ್ಲ.

ಆರೋಪಿಯವರು ಯಾವ ಉದ್ದೇಶಕ್ಕಾಗಿ ನನ್ನ ಬಳಿ ಎರಡು ಲಕ್ಷ ರೂಪಾಯಿಗಳನ್ನು ಪಡೆದುಕೊಂಡಿದ್ದರು ಎಂದರೆ ಬಾವಿ ಕೆಲಸವನ್ನು ಮಾಡಿಸಿಕೊಳ್ಳಲು ಸದರಿ ಹಣವನ್ನು ಪಡೆದುಕೊಂಡಿದ್ದರು, ಎಲ್ಲಿ ಸದರಿ ಕೆಲಸ ನಡೆದಿರುತ್ತದೆ, ಯಾವ ದಿನಾಂಕ ಹಾಗೂ ತಿಂಗಳು ಎಂದು ನನಗೆ ನೆನಪಿಲ್ಲ.

ಆರೋಪಿಯನ್ನು ಹೊರತುಪಡಿಸಿ ಬೇರೆ ಯಾರಿಗೆ , ಯಾವ ಯಾವ ದಿನಾಂಕದಂದು ಎಷ್ಟೆಷ್ಟು ಹಣವನ್ನು ಸಾಲವಾಗಿ ಕೊಟ್ಟಿರುತ್ತೇನೆ ಎಂಬ ಬಗ್ಗೆ ನನಗೆ ನೆನಪಿಲ್ಲ. ನನಗೆ ಸಿಂಡಿಕೇಟ್ ಬ್ಯಾಂಕ್ ಹಾಗೂ ಕರ್ನಾಟಕ ಬ್ಯಾಂಕ್ ನಲ್ಲಿ ಬ್ಯಾಂಕ್ ಖಾತೆಗಳು ಇರುತ್ತದೆ. ಅವುಗಳಲ್ಲಿ ಎಷ್ಟು ಬ್ಯಾಲೆನ್ಸ್ ಇರುತ್ತದೆ ಎಂಬ ಬಗ್ಗೆ ನನಗೆ ನೆನಪಿಲ್ಲ. ನಾನು ಬ್ಯಾಂಕ್ ವ್ಯವಹಾರಗಳನ್ನು ಮಾಡುತ್ತಿದ್ದೇನೆ.

ನನ್ನ ಹೆಸರಿನಲ್ಲಿ ಒಂದು ಎಕರೆ ಅಡಿಕೆ ಜಮೀನು ಇರುತ್ತದೆ. ಸದರಿ ಜಮೀನು

ಯಾವುದೇ ಬ್ಯಾಂಕಿಗೆ ಅಡಮಾನವಾಗಿರುವುದಿಲ್ಲ.

ಸಾಲಗಳನ್ನು ಕೊಡುವ ಸಮಯದಲ್ಲಿ ಸದರಿ ವ್ಯಕ್ತಿಗಳಿಂದ ಪ್ರತಿರೂಪವಾಗಿ ನಾನೇನಾದರೂ ವಸ್ತುಗಳನ್ನು ಪಡೆದುಕೊಳ್ಳುತ್ತೇನೆಯೇ ಎಂದರೆ ನನ್ನ ಭದ್ರತೆಗಾಗಿ ಅವರಿಂದ ಚೆಕ್ಕುಗಳನ್ನು ಪಡೆದುಕೊಳ್ಳುತ್ತೇನೆ. ನಾಗರಾಜ್ ಅವರಿಗೆ ಸಾಲವನ್ನು ಕೊಡುವ ಸಮಯದಲ್ಲಿ ಚೆಕ್ಕನ್ನು ಕೊಡಬೇಕು ಎಂದು ನಾನೇನಾದರೂ ಈ ರೀತಿ ಬೇಡಿಕೆಯನ್ನು ಇಟ್ಟಿರುತ್ತೇನೆಯೆ ೞಎಂದರೆ ಅವರೇ ಸ್ವತಃ ನನಗೆ ಚೆಕ್ಕನ್ನು ಕೊಟ್ಟಿರುತ್ತಾರೆ. ನಾನು ಆರೋಪಿಯವರಿಗೆ ಸಾಲವನ್ನು ಕೊಟ್ಟ ದಿನಾಂಕಕ್ಕಿಂತ ಎಷ್ಟು ದಿನಗಳ ಅಥವಾ ತಿಂಗಳುಗಳ ಪೂರ್ವದಲ್ಲಿ ಅವರು ಸದರಿ ಸಾಲವನ್ನು ನನ್ನ ಬಳಿ ಕೇಳಿರುತ್ತಾರೆ ಎಂದರೆ ನನಗೆ ನೆನಪಿಲ್ಲ.

ಸದರಿ ಸಾಲವನ್ನು ಆರೋಪಿಗೆ ಕೊಡುವ ಸಮಯದಲ್ಲಿ ಅವರು ಎಷ್ಟು ಸಮಯದಲ್ಲಿ ಅದನ್ನು ವಾಪಾಸು ಕೊಡುತ್ತಾರೆ ಎಂದು ತಿಳಿಸಿದ್ದರು ಎಂದರೆ ಅದನ್ನು ಅವರು ಸುಮಾರು 6-7 ತಿಂಗಳುಗಳಲ್ಲಿ ವಾಪಾಸು ಕೊಡುತ್ತಾರೆ ಎಂದು ತಿಳಿಸಿರುತ್ತಾರೆ. ಆರೋಪಿಯವರು ಸಾಲವನ್ನು ಕೇಳಿದ ಸುಮಾರು 2-3 ದಿನಗಳಲ್ಲಿ ನಾನು ಅವರಿಗೆ ಹಣವನ್ನು ನೀಡಿರುತ್ತೇನೆ. ಆರೋಪಿಯವರು ನೀಡಿದ ಚೆಕ್ಕುಗಳ ಸಂಖ್ಯೆಗಳು ನನಗೆ ನೆನಪಿವೆ. ಸದರಿ ಚೆಕ್ಕುಗಳನ್ನು ನನಗೆ ಕೊಡುವ ಸಮಯದಲ್ಲಿ ಅವರು ಚೆಕ್ ಪುಸ್ತಕವನ್ನು ತೆಗೆದುಕೊಂಡು ಬಂದಿರುವುದಿಲ್ಲ, ನಾಲ್ಕು ಚೆಕ್ಕುಗಳನ್ನು ಮಾತ್ರ ತೆಗೆದುಕೊಂಡು ಬಂದಿರುತ್ತಾರೆ. ಸದರಿ ಹಣವನ್ನು ಕೊಟ್ಟ ಎರಡು ದಿನಗಳ ನಂತರ ಆರೋಪಿಯವರು ನನಗೆ ನಾಲ್ಕು ಚೆಕ್ಕುಗಳನ್ನು ನೀಡಿರುತ್ತಾರೆ. ಸದರಿ ಚೆಕ್ಕುಗಳು ಸಿಂಡಿಕೇಟ್ ಬ್ಯಾಂಕ್, ಕೊಪ್ಪ ಶಾಖೆಯ ಚೆಕ್ಕುಗಳಾಗಿರುತ್ತವೆ. ಆ ಸಮಯದಲ್ಲಿ ಸಿಂಡಿಕೇಟ್ ಬ್ಯಾಂಕ್ ಕೆನರಾ ಬ್ಯಾಂಕ್ ಜೊತೆಯಲ್ಲಿ ಮರ್ಜ್ ಆಗಿರಲಿಲ್ಲ. ಆ ನಂತರ ಸದರಿ ಚೆಕ್ಕುಗಳನ್ನು ಆರೋಪಿಗೆ ಕೊಟ್ಟು ಕೆನರಾ ಬ್ಯಾಂಕ್ ನಿಂದ ಯಾವುದೇ ಅನುಮತಿಯನ್ನು ನಾನು ಪಡೆದುಕೊಂಡಿರುವುದಿಲ್ಲ. ಸದರಿ ಚೆಕ್ಕುಗಳ ಮೇಲೆ ಕೆನರಾ ಬ್ಯಾಂಕ್, ಕೊಪ್ಪ ಶಾಖೆ ಎಂದು ನಮೂದಾಗಿರಲಿಲ್ಲ. ಸಿಂಡಿಕೇಟ್ ಬ್ಯಾಂಕ್ ಕೆನರಾ ಬ್ಯಾಂಕ್ ಜೊತೆಯಲ್ಲಿ ಮರ್ಜ್ ಆದ ನಂತರ ಸದರಿ ಚೆಕ್ಕುಗಳನ್ನು ನಾನು ಕೆನರಾ ಬ್ಯಾಂಕ್ ಮುಂದೆ ಹಾಜರುಪಡಿಸಿ ಅವರಿಂದ ನಾನು ಯಾವುದೇ ಅನುಮತಿ ಪಡೆದಿರುವುದಿಲ್ಲ. ಸದರಿ ಚೆಕ್ಕುಗಳು

ಆರೋಪಿಯ ಬ್ಯಾಂಕ್ ಖಾತೆಗೆ ಸಂಬಂಧಿಸಿದ್ದು ಎಂಬ ಬಗ್ಗೆ ತಿಳಿದುಕೊಳ್ಳಲು ಅವರ ಬ್ಯಾಂಕ್ ಪಾಸ್ ಬುಕ್ ಜೊತೆಯಲ್ಲಿ ತಾಳೆ ಮಾಡಿ ನೋಡಿರುವುದಿಲ್ಲ.

ನಾನಾಗಲಿ, ನನ್ನ ಕುಟುಂಬದವರಾಗಲೀ ಫಿರ್ಯಾದುದಾರರ ಮನೆಗೆ ಹೋಗುವುದು ಬರುವುದು ಮಾಡುವುದಾಗಲೀ ಅಥವಾ ಫಿರ್ಯಾದುದಾರರು ಹಾಗೂ ಅವರ ಕುಟುಂಬದವರು ನಮ್ಮ ಮನೆಗೆ ಬರುವುದು ಹೋಗುವುದು ಮಾಡಿರುವುದಿಲ್ಲ.

ನಾಲ್ಕು ಚೆಕ್ಕುಗಳಲ್ಲಿ ಆರೋಪಿಯವರು ಯಾವ ಶಾಯಿಯಲ್ಲಿ ಸಹಿ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅವರು ಯಾವ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡಿರಾುತ್ತಾರೆ. ನಾನು ಅವರಿಗೆ ಸಾಲವನ್ನು ಕೊಟ್ಟಿರುವ ಬಗ್ಗೆ ಅವರು ನನಗೆ ಭದ್ರತೆಗಾಗಿ ನಾಲ್ಕು ಚೆಕ್ಕುಗಳನ್ನು ನೀಡಿರುವ ಬಗ್ಗೆ ಹಾಗೂ ಸದರಿ ಸಾಲವನ್ನು ಮರುಪಾವತಿ ಮಾಡಿರುವ ಬಗ್ಗೆ ನಮ್ಮಲ್ಲಿ ಯಾವುದೇ ಕರಾರುಪತ್ರವಾಗಿರುವುದಿಲ್ಲ, ಬರೀ ಬಾಯಿ ಮಾತಿನ ಮೂಲಕ ಆಗಿರುತ್ತದೆ. ಆರೋಪಿಯವರಿಂದ ನಾಲ್ಕು ಚೆಕ್ಕುಗಳನ್ನು ಪಡೆದುಕೊಂಡ ರೀತಿಯಲ್ಲಿ ಬೇರೆ ಯಾರಿಂದ ನಾನು ಚೆಕ್ಕುಗಳನ್ನು ಪಡೆದುಕೊಂಡಿರುವುದಿಲ್ಲ. ನಾನು ಅವರಿಗೆ ಕೊಟ್ಟಿದ್ದ ಸಾಲದ ಭದ್ರತೆಗಾಗಿ ಆರೋಪಿಯಿಂದ ನಾಲ್ಕು ಚೆಕ್ಕುಗಳನ್ನು ಪಡೆದುಕೊಂಡಿರುತ್ತೇನೆ. ನಾನು ಆರೋಪಿಗೆ ಹಣವನ್ನು ಕೊಟ್ಟ ಸುಮಾರು 6-7 ತಿಂಗಳುಗಳಲ್ಲಿ ಅವರು ಸದರಿ ಹಣವನ್ನು ನನಗೆ ವಾಪಾಸು ಕೊಟ್ಟಿರುತ್ತಾರೆ. ಆರೋಪಿಯವರು ನನಗೆ ಯಾವ ತಿಂಗಳು, ಯಾವ ವರ್ಷದಲ್ಲಿ ಸದರಿ ಹಣವನ್ನು ವಾಪಾಸು ಕೊಟ್ಟಿರುತ್ತಾರೆ ಎಂಬ ಬಗ್ಗೆ ನನಗೆ ನೆನಪಿಲ್ಲ.

ಸದರಿ ವ್ಯವಹಾರವು ನನ್ನ ಮನೆಯಲ್ಲಿ ನಡೆದಿರುವುದಿಲ್ಲ, ಆದರೆ ಗುಣವಂತೆ ಮೆಡಿಕಲ್ ನ ಎದುರುಗಡೆ ನಡೆದಿರುತ್ತದೆ, ಎಷ್ಟು ಹೊತ್ತಿಗೆ ಎಂದು ನನಗೆ ನೆನಪಿಲ್ಲ. ನಾನು ಅವರಿಗೆ ಸಾಲವನ್ನು ಕೊಡುವ ಸಮಯದಲ್ಲಿ ಹಾಗೂ ಅವರು ನನಗೆ ಚೆಕ್ಕುಗಳನ್ನು ಭದ್ರತೆಗಾಗಿ ಕೊಡುವ ಸಮಯದಲ್ಲಿ ಯಾರೂ ಸಾಕ್ಷಿದಾರರುಗಳು ಇರಲಿಲ್ಲ. ಸದರಿ ಹಣವನ್ನು ಆರೋಪಿಯವರು ಗುಣವಂತೆ ಮೆಡಿಕಲ್ ಎದುರುಗಡೆ ನನಗೆ ಮರುಪಾವತಿ ಮಾಡಿರುತ್ತಾರೆ,

ಎಷ್ಟು ಹೊತ್ತಿಗೆ ಎಂದು ನನಗೆ ಗೊತ್ತಿಲ್ಲ. ಆರೋಪಿಯವರು ಚೆಕ್ ನ ಒಂದೇ ಭಾಗಕ್ಕೆ ಸಹಿ ಮಾಡಿರುತ್ತಾರೆ, ಆ ದಿನ ಬೇರೆ ಯಾವುದೇ ಬರವಣಿಗೆಯನ್ನು ಮಾಡಿರುವುದಿಲ್ಲ. ಚೆಕ್ಕಿನ ಮೇಲೆ ಸಹಿಯನ್ನು ಬಿಟ್ಟು ಬೇರೆ ಯಾವುದೇ ಬರವಣಿಗೆ ಮಾಡಿರುವುದಿಲ್ಲ.

ಈಗ ನ್ಯಾಯಾಲಯದ ಮುಂದಿರುವ ನಿಪಿ.1 ರ ಚೆಕ್ಕಿನ ಮೇಲೆ ಆರೋಪಿ ಅವರ ಸಹಿ ಇದ್ದ ಜಾಗದ ಕೆಳಗೆ ನಾಗರಾಜ್ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಅದರಲ್ಲಿ ಈಗ ಕೆನರಾ ಬ್ಯಾಂಕ್ ಎಂದು ಸೀಲ್ ಕೂಡಾ ಇದೆ ಎಂದರೆ ಸರಿ.

ರಾಜೇಶ್ ಅವರು ನನಗೆ ಫೋನ್ ಮಾಡಿದಾಗ ನಾನು ನನ್ನ ಡೈರಿಯಲ್ಲಿ ನೋಡಿ ಪರಿಶೀಲಿಸಿದಾಗ ಸದರಿ ನಾಲ್ಕು ಚೆಕ್ಕುಗಳು ಕಾಣೆಯಾಗಿರುವ ಬಗ್ಗೆ ನನಗೆ ಗೊತ್ತಾಗಿರುತ್ತದೆ. ವ್ಯವಹಾರಗಳ ಬಗ್ಗೆ ಡೈರಿಯಲ್ಲಿ ಬರೆಯುವ ಅಭ್ಯಾಸ ನನಗೆ ಇರುವುದಿಲ್ಲ. ಸದರಿ ಡೈರಿಯಲ್ಲಿ ಚೆಕ್ಕುಗಳ ಜೊತೆಯಲ್ಲಿ ಬೇರೆ ದಾಖಲಾತಿಗಳೂ ಸಹಾ ಇದ್ದವು. ಸದರಿ ಡೈರಿ ನನ್ನ ಮನೆಯ ರೂಮಿನಲ್ಲಿ ಕಬೋರ್ಡ್ ನಲ್ಲಿ ಮೇಲುಭಾಗದಲ್ಲಿ ಇತ್ತು. ನಾನು ಹಾಗೂ ನನ್ನ ತಂದೆಯವರು ಒಟ್ಟಿಗೇ ವಾಸವಿದ್ದೇವೆ.

ಪಿರ್ಯಾದುದಾರರು ಆರೋಪಿ ನೋಟಿಸನ್ನು ಜಾರಿ ಮಾಡಿರುವ ಬಗ್ಗೆ ನನಗೆ ಫೋನ್ ಮೂಲಕ ತಿಳಿಸಿರುತ್ತಾರೆ. ಆ ಸಮಯದಲ್ಲಿ ಬ್ಯಾಂಕಿನ ಹೆಸರು, ಚೆಕ್ ನ ನಂಬರ್ , ದಿನಾಂಕ ಹಾಗೂ ಅಮೌಂಟನ್ನು ನನಗೆ ಫೋನ್ ಮೂಲಕ ತಿಳಿಸಿರುತ್ತಾರೆ. ಅಕ್ಟೋಬರ್ - ನವೆಂಬರ್ , 2021 ರಲ್ಲ್ ಮಧ್ಯಾಹ್ನ ಹೊತ್ತಿನಲ್ಲಿ ಫಿರ್ಯಾದುದಾರರು ನನಗೆ ಈ ಬಗ್ಗೆ ಫೋನ್ ಮೂಲಕ ತಿಳಿಸಿರುತ್ತಾರೆ, ಸದರಿ ಮೊಬೈಲ್ ನಂಬರ್ ನನಗೆ ಈಗ ನೆನಪಿಲ್ಲ. ಎಷ್ಟು ಹೊತ್ತಿಗೆ ಸದರಿ ಕರೆ ನನಗೆ ಈಗ ಬಂದಿರುತ್ತದೆ ಎಂದರೆ ನನಗೆ ನೆನಪಿಲ್ಲ. ಯಾವ ಮುಖಾಂತರ ಸದರಿ ನೋಟಿಸನ್ನು ಕೊಟ್ಟಿರುತ್ತಾರೆ ಎಂಬ ಬಗ್ಗೆ ನನಗೆ ತಿಳಿಸಿರುವುದಿಲ್ಲ. ಅದೇ ರೀತಿ ಸದರಿ ನೋಟಿಸನ್ನು ನಾನು ನೋಡಿರುವುದಿಲ್ಲ. ಸದರಿ ನೋಟಿಸನ್ನು ನಾಗರಾಜ್ ಅವರಿಗೆ ಕೊಟ್ಟಿರುತ್ತಾರೆ ಆದರೆ ಯಾವ ವಿಳಾಸಕ್ಕೆ ಕೊಟ್ಟಿರುತ್ತಾರೆ ಎಂಬ ಬಗ್ಗೆ ನನಗೆ ತಿಳಿಸಿರುವುದಿಲ್ಲ. ನೋಟಿಸ್ ನಲ್ಲಿ ನಮೂದಿಸಿರುವ ವಿಳಾಸದಲ್ಲಿ ಆರೋಪಿಯು ಆ ಸಮಯದಲ್ಲಿ

ವಾಸವಿರಲಿಲ್ಲ. ನೋಟಿಸಿನಲ್ಲಿ ನಮೂದಿಸಿರುವ ಅಮೌಂಟ್ ನಾಲ್ಕು ಲಕ್ಷ ರೂಪಾಯಿಗಳಾಗಿದ್ದವು. ನಾಲ್ಕು ಲಕ್ಷ ರೂಪಾಯಿಗಳು ನೋಟಿಸ್ ನಲ್ಲಿ ನಮೂದಾಗಿರುವ ಬಗ್ಗೆ ನನಗೆ ಯಾರು ಹೇಳಿರುತ್ತಾರೆ ಎಂದರೆ ನಾಗರಾಜ್ ಅವರು ಹೇಳಿರುತ್ತಾರೆ, ಯಾವಾಗ ಹೇಳಿರುತ್ತಾರೆ ಎಂಬ ಬಗ್ಗೆ ನನಗೆ ನೆನಪಿಲ್ಲ.

ನನ್ನ ಮನೆಯಿಂದ ನಾಲ್ಕು ಚೆಕ್ಕುಗಳು ಕಾಣೇಯಾಗಿರುವ ಬಗ್ಗೆ ದೂರು ಕೊಡಲು ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಾನು ಕೊಪ್ಪ ಪೋಲಿಸ್ ಠಾಣೆಗೆ ದೂರನ್ನು ಕೊಡಲು ಹೋದಾಗ ನನ್ನ ದೂರನ್ನು ಅವರು ಪಡೆದುಕೊಂಡಿರುವುದಿಲ್ಲ. ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ ಅವರು ನನ್ನ ದೂರನ್ನು ಪಡೆದುಕೊಂಡಿರುವುದಿಲ್ಲ. ಆ ಸಮಯದಲ್ಲಿ ಈ ವಿಚಾರವನ್ನು ನಾನು ನಾಗರಾಜ್ ಅವರಿಗೆ ತಿಳಿಸಿರುತ್ತೇನೆ. ಇಲ್ಲಿಯವರೆಗೂ ನಾಗರಾಜ್ ಅವರು ತಮ್ಮ ನಾಲ್ಕು ಚೆಕ್ಕುಗಳಿಗೆ ಸಂಬಂಧಿಸಿದ ನಂತರ ನನ್ನ ವಿರುದ್ದ ಯಾವುದಾದರೂ ಕಾನೂನು ಕ್ರಮ ಕೈಗೊಂಡಿರುತ್ತಾರೆಯೇ ಎಂದರೆ ಇಲ್ಲ. ಸೆಪ್ಟೆಂಬರ್ - ಅಕ್ಟೋಬರ್ , 2021 ರಲ್ಲಿ ನಾಗರಾಜ್ ಅವರು ಎಲ್ಲಿ ವಾಸವಿದ್ದರು ಎಂದರೆ ಕುವೆಂಪು ನಗರದಲ್ಲಿ ವಾಸವಿದ್ದರು, ಈಗ ಅವರು ಎಲ್ಲಿ ವಾಸವಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮನೆಯಲ್ಲಿ ಬೇರೆ ಯಾವುದೇ ವಸ್ತುಗಳ ಕಳ್ಳತನವಾಗಿರುವುದಿಲ್ಲ, ಚೆಕ್ಕುಗಳು ಮಾತ್ರ ಕಳ್ಳತನವಾಗಿರುತ್ತವೆ.

ಈ ರೀತಿ ದೂರನ್ನು ನಾನು ಕೊಡಲು ಪೋಲಿಸ್ ಠಾಣೆಗೆ ಹೋದಾಗ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವ ಬಗ್ಗೆ ನನಗೆ ಅವರು ಯಾವುದೇ ಹಿಂಬರಹವನ್ನು ನೀಡಿರುವುದಿಲ್ಲ. ನಾನು ಪೋಲಿಸ್ ಠಾಣೆಗೆ ಒಬ್ಬನೇ ಹೋಗಿರುತ್ತೇನೆ. ಈ ರೀತಿ ನನ್ನ ದೂರನ್ನು ಪೋಲಿಸರು ತೆಗೆದುಕೊಳ್ಳದೇ ಇರುವ ಬಗ್ಗೆ ನಾನು ಪೋಲಿಸ್ ಮೇಲಾಧಿಕಾರಿಗಳಿಗೆ ಯಾವುದೇ ದೂರನ್ನಾ ನೀಡಿರುವುದಿಲ್ಲ. ಆರೋಪಿಯವರು ನನಗೆ ತುಂಬಾ ಆತ್ಮೀಯರು ಎಂದರೆ ಸರಿ. ಆರೋಪಿ ನನ್ನ ಮನೆಗೆ ಬರುವುದು ಹಾಗೂ ನಾನು ಅವರ ಮನೆಗೆ ಹೋಗುವುದು ಇವತ್ತೂ ಕೂಡಾ ಇರುತ್ತದೆ ಎಂದರೆ ಸರಿ. ಸದರಿ ಚೆಕ್ಕುಗಳನ್ನು ನಾನು ಇಟ್ಟಿರುವ ರೂಮಿಗೆ ಬೇರೆ ಯಾರಿಗೂ ಪ್ರವೇಶ ಇರಲಿಲ್ಲ.

ನಾಗರಾಜ್ ಎಂಬುವವರಿಗೇ ಎರಡು ಲಕ್ಷ ರೂಪಾಯಿಗಳನ್ನು ಕೊಡಲು ನನಗೆ ಅ ಸಮಯದಲ್ಲಿ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚೆಕ್ ಪ್ರಕರಣಗಳು ಇದೇ ನ್ಯಾಯಾಲಯದಲ್ಲಿ ನನ್ನ ವಿರುದ್ಧ ದಾಖಲಾಗಿದ್ದರಿಂದ ನನಗೆ ನಾಗರಾಜ್ ಅವರಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಡಲು ಅ ಸಮಯದಲ್ಲಿ ಆರ್ಥಿಕ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿಯವರು ನನಗೆ ಸಹಿ ಮಾಡಿದ ನಾಲ್ಕು ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ಭದ್ರತೆಗಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನನಗೂ ಹಾಗೂ ಫಿರ್ಯಾದುದಾರರಿಗೂ ಯಾವುದೇ ರೀತಿಯ ವ್ಯಾವಹಾರಿಕ ಸಂಬಂಧ ಇರುವುದಿಲ್ಲ ಹಾಗೂ ಅವರು ನನ್ನ ಮನೆಗೆ ಬರುವುದಾಗಲೀ ಹಾಗೂ ನಾನು ಅವರ ಮನೆಗೆ ಹೋಗಲು ಯಾವುದೇ ಕಾರಣಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಕಳೆದುಹೋಗಿವೆ ಎನ್ನಲಾದ ನಾಲ್ಕು ಚೆಕ್ಕುಗಳಲ್ಲಿ ಈಗ ನ್ಯಾಯಾಲಯದ ಮುಂದಿರುವ ನಿಪಿ1 ರ ಚೆಕ್ ಎಷ್ಟನೇ ಚೆಕ್ ಆಗಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

ಆರೋಪಿಯವರು ನನಗೆ ನೀಡಿರುವ ನಾಲ್ಕು ಸಿಂಡಿಕೇಟ್ ಬ್ಯಾಂಕ್ ನ ಚೆಕ್ಕುಗಳಿಗೂ ಹಾಗೂ ಈಗ ನ್ಯಾಯಾಲಯದ ಮುಂದಿರುವ ಕೆನರಾ ಬ್ಯಾಂಕ್ ನ ಚೆಕ್ಕಿಗೂ ಯಾವ ರೀತಿಯ ಸಂಬಂಧ ಇದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ನನಗೂ ಹಾಗೂ ಫಿರ್ಯಾದುದಾರರ ನಡುವೆ ಯಾವುದೇ ಮಾತುಕತೆ ಇಲ್ಲ ಎಂದರೆ ಸರಿಯಲ್ಲ. ಫಿರ್ಯಾದುದಾರರು ಸದರಿ ನಾಲ್ಕು ಚೆಕ್ಕುಗಳನ್ನು ತೆಗೆದುಕೊಂಡುಹೋಗಿರುವ ಬಗ್ಗೆ ನಾನು ಅವರಿಗೆ ಯಾವುದೇ ತಿಳುವಳಿಕೆ ನೋಟಿಸನ್ನು ನೀಡಿರುವುದಿಲ್ಲ.

ಪೋಲಿಸರು ದೂರನ್ನು ತೆಗೆದುಕೊಳ್ಳದೇ ಇದ್ದ ಸಮಯದಲ್ಲಿ ನಾನು ನ್ಯಾಯಾಲಯದ ಮುಂದೆ ಯಾವುದೇ ಖಾಸಗಿ ದೂರನ್ನೂ ಸಲ್ಲಿಸಿರುವುದಿಲ್ಲ, ಫಿರ್ಯಾದುದಾರರು ಸದರಿ ಪ್ರಕರಣವನ್ನು ವಾಪಾಸು ತೆಗೆದುಕೊಳ್ಳುತ್ತಾರೆ ಎಂದು ತಿಳಿಸಿರುತ್ತಾರೆ. ಸದರಿ ಪ್ರಕರಣವು

ದಾಖಲಾದ ನಂತರ ಸಹಾ ನಾನು ಫಿರ್ಯಾದುದಾರರ ವಿರುದ್ಧ ಯಾವುದೇ ಕಾನೂನಿನ ಕ್ರಮವನ್ನು ಇಲ್ಲಿಯವರೆಗೂ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿಯವರು ನನಗೆ ಯಾವುದೇ ನಾಲ್ಕು ಸಹಿ ಮಾಡಿರುವ ಖಾಲಿ ಚೆಕ್ಕುಗಳನ್ನು ಸಾಲದ ಭದ್ರತೆಗಾಗಿ ನೀಡಿರುವುದಿಲ್ಲ, ಫಿರ್ಯಾದುದಾರರು ಸದರಿ ಚೆಕ್ಕುಗಳನ್ನು ನನ್ನ ಮನೆಯಿಂದ ತೆಗೆದುಕೊಂಡು ಹೋಗಿರುವುದಿಲ್ಲ, ನಾನು ಆರೋಪಿಯ ಪರವಾಗಿ ಮಾನ್ಯ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ದಿನಾಂಕಃ20/01/2025 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹ
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ